Mr. SPEAKER.—The House wants all Ministers to stay.

Sri S. R. KANTHI.—If there is something you have up against me, you can have it, I have no objection.

I have already said that these posts are not created anew. They have been already there in the Colleges in South Kanara and Coorg.

The Government thought that this system should be extended to other areas. Even in the Mysore University in old Mysore, there were such posts. So we felt that such posts should be revised. The qulifications and other matters were already there. It was not necessary to consult the Academic Council.

4-30 P.M.

ಶ್ರೀ ಅಣ್ಣಾರಾವ್ ಗಣಮುಖ.—ಯಾವುದಾದರೂ ಕಾಲೇಜಿನಲ್ಲಿ ಒಬ್ಬ ಟೀಚರಾಗಲಿ, ಲೆಕ್ಚರರ್ ಆಗಲಿ ಅಥವಾ ಡೆಮಾರ್ಸ್ಟ್ರೇಟರಾಗಲಿ, ಮೊದಲನೆಯ ಮಟ್ಟದಲ್ಲಿ ಸೇರ್ಪಡೆ ಮಾಡಬೇಕಾದರೆ ಆತನ ಅರ್ಹತೆ M.A., MSc. (II Class) ಇರಬೇಕೆಂದು ನಿರ್ಣಯ ಗಳಾಗಿವೆ. ಸಿಂಡಿಕೇಟಿನವರು ಮತ್ತು ಸೆನೆಟ್ ನವರು, ಆ ಪ್ರಕಾರ ಆಜ್ಞೆ ಮಾಡಿದ್ದಾರೆ. ಆದ್ದರಿಂದ ಇವು ಯಾವುದೇ ಹುದ್ದೆಗಳು—designation ಏನೇ ಇರಲಿ—ಇದಕ್ಕಿಂತಲೂ ಮುಂಚೆ ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಲೆಕ್ಚರರ್ ಗ್ರೇಡ್ (1), ಲೆಕ್ಚರರ್ ಗ್ರೇಡ್ (2), ಲೆಕ್ಚರರ್ ಗ್ರೇಡ್ (3) ಎಂದು ಮೂರು ತೆರದಲ್ಲಿದ್ದುವು. ಈ ಮೂರು ಗ್ರೇಡ್‌ಗಳನ್ನೂ 1957 ನೆಯ ಇಸವಿಯಲ್ಲಿ ಒಂದು ಗೂಡಿಸಿದರು. ಆದ್ದರಿಂದ ನನಗೆ ಗೊತ್ತಿರುವ ಮಟ್ಟಿಗೆ ಹೇಳುವುದಾದರೆ, ಅವರು ಡೆಮಾರ್ಸ್ಟ್ರೇಟರುಗಳ, ಟ್ಯೂಟರುಗಳ ಹುದ್ದೆಯನ್ನು create ಮಾಡಿದರು, ಆ ಪೋಸ್ಟ್ ಇರಕೂಡದೆಂದು ಹೇಳಿದ ವಾದ ಸರಿಯಲ್ಲವೆಂದು ನಾನು ಹೇಳುತ್ತೇನೆ. ಆದಕ್ಕೆ ಬದಲು, ಈಗಿರತಕ್ಕ ಲೆಕ್ಚರರುಗಳಿಗೆ ಅನ್ಯಾಯವಾಗಿದೆಯೆಂದರೆ ಅದರ ಬಗ್ಗೆ ಸರ್ಕಾರದ ವರನ್ನು ಕೇಳಿಕೊಳ್ಳಬಹುದು. ಈಗಿರುವವರಿಗೆ ಇದನ್ನು ಅನ್ವಯಿಸಕೂಡದು, ಮುಂದಿನವರಿಗೆ ಮಾಡ ಬಹುದು ಎಂದು ಹೇಳಿದ್ದರೆ ಸಾಧ್ಯವಾದ್ದು. ಹಾಗಿಲ್ಲದೆ, ಅದನ್ನೂ ಇದನ್ನೂ ಕೂಡಿಸಿಬಿಟ್ಟು ಡೆಮಾರ್ಸ್ಟ್ರೇಟರುಗಳ ಮತ್ತು ಟ್ಯೂಟರುಗಳ ಜಾರೆ ಮನ್ನು create ಮಾಡಿ, ಗೊಂದಲ ಎಬ್ಬಿಸಿದ್ದಾಗ ಎಂದು ಹೇಳುವುದು ಸರಿಯಲ್ಲ.

ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದ policy ಏನಿದೆ ಅದನ್ನು ಹಿಡಿದು ವೈಯಕ್ತಿಕವಾಗಿ ಶ್ರೀಮಾರ್ಕಂಡಿಯವರನ್ನು ಟೀಕೆ ಮಾಡುವ ಪ್ರಶ್ನೆ ಹುಟ್ಟುವುದಿಲ್ಲ. ಏಕೆಂದರೆ ಸರ್ಕಾರದ ಕೆಲಸಗಳೆಲ್ಲವೂ ಜಂಟಿ ಜವಾಬ್ದಾರಿಯಿಂದ ನಡೆಯುತ್ತಿರುತ್ತದೆ. ಮಂತ್ರಿ ಮಂಡಳ—ಎಲ್ಲರೂ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಕ್ಯಾಬಿನೆಟ್ ತೀರ್ಮಾನ ವಾಯಿತೆಂದರೆ, ಯಾವುದೇ ಒಬ್ಬ ಮಂತ್ರಿಯ ಮೇಲೆ ಅದನ್ನು ಆರೋಪಿಸುವುದು, ಯಾರೋ ಒಬ್ಬ ಮಂತ್ರಿಯಿಂದ ಆಗಿದೆಯೆಂದು ಹೇಳುವುದು ಸರಿಯಲ್ಲ It is collective wisdom.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಂದರೇನು ! ಎಲ್ಲರೂ ಹೋಗಬೇಕೆಂದು ಹೇಳುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖ.—ಆದ್ದರಿಂದ ಒಬ್ಬ ಮಂತ್ರಿಯನ್ನು ಬೆರಳಿಟ್ಟು ತೋರಿಸಿ (point out ಮಾಡಿ) 'ನೀವೇ ಮಾಡಿದ್ದೀರಿ, ಈ ದೇಶಕ್ಕೆಲ್ಲಾ ನೀವೇ ಹಾನಿ ಮಾಡಿದ್ದೀರಿ' ಎಂದರೆ ಡೆಮಾಕ್ರಸಿಯಲ್ಲಿ ಸರ್ಕಾರ ಹೇಗೆ ಕೆಲಸ ಮಾಡುತ್ತಿದೆಂಬುದನ್ನೇ ಅವರು ಅರ್ಥಮಾಡಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಯಾವುದಾದರೂ ತೀರ್ಮಾನ ಇಂದು ತೆಗೆದು ಕೊಂಡಿದ್ದರೆ, ಅದು ಇಂದು ಕಂಠಿಯವರೇ ತೆಗೆದು ಕೊಂಡಿದ್ದಲ್ಲ. ಅವರೇ ತಪ್ಪಿತಸ್ಥರು ಎಂದು ಹೇಳುವುದು ಸರಿಯಲ್ಲ.

ಕಡೆಯದಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. 'ಕಡ್ಡಿಗೆ ಗುಡ್ಡ ಮಾಡಬಾರದು' ಸರ್ಕಾರದವರು ಎಂದೆಂದೂ ತಪ್ಪ ಮಾಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಒಂದು ವೇಳೆ ತಪ್ಪುಗಳು ನಿಜವಾಗಿಯೂ ಇದ್ದರೆ, ಅದನ್ನು ಈ ಮನೆಯಲ್ಲಿರುವವರೆಲ್ಲರೂ ಸೇರಿ ತಿದ್ದುವುದಕ್ಕೆ ಹೋಗಬೇಕು. ಹಾಗೆ ತಿದ್ದುವುದನ್ನು ಬಿಟ್ಟು 'ನಿಕಾಲ್' ಮಾಡಿಬಿಡುತ್ತೇವೆನ್ನುವುದು ಸರಿಯಲ್ಲ. ಸಣ್ಣದಾದ ಮಾತನ್ನು ದೊಡ್ಡದುಮಾಡಿ, 'ವಿಶ್ವಾಸವೇ ಇಲ್ಲ'ವೆನ್ನುವುದು ಸರಿಯಲ್ಲ. Politically ಅದು ಸರಿಯಾಗಿರಬಹುದು; ಆದರೆ ಬೇರೆ ದೃಷ್ಟಿಯಿಂದ ಅಲ್ಲ. ಆದ್ದರಿಂದ ಯಾವುದೇ ಕಾರಣದಿಂದ ಈ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ತರುವುದಕ್ಕೆ ಈ ಸರ್ಕಾರದಿಂದ ಅಂಥ ಅಪರಾಧವೇನೂ ಆಗಿಲ್ಲವೆಂದು ಹೇಳುತ್ತೇನೆ.

Business of the House

Mr. SPEAKER.—Before I call upon others, I suppose we are agreed that tomorrow we are sitting in the morning at 8-30 and we shall drop the question hour because we can give more time for discussion of this subject.

MEMBERS.—Yes.

Mr. SPEAKER.—Question hour will be dropped. I have an agreed list of members. I will scrutinise it. Now I call upon Sri S. M. Krishna to speak.

Motion of No-Confidence in the Council of Ministers.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಗಳೇ, ನಮ್ಮ ನಾಯಕರಾದ ಮಾನ್ಯ ಶಿವಪ್ಪನವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಅವಿಶ್ವಾಸದ ಠರಾವನ್ನು ಸಮರ್ಥನೆ ಮಾಡುವುದಕ್ಕೆ ನಾನು ನಿಂತಿದ್ದೇನೆ. ಕಳೆದ ಹೆಬ್ರುವರಿಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಾದ ನಂತರ ಬಹುಮತ